# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-2403/2015/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 1/3/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

ವಿಷಯ: ಶ್ರೀ.ರೆಡ್ಡಿನಾಯಕ್, ಹಿಂದಿನ ತಾಲ್ಲೂಕು ಅಭಿವೃದ್ಧಿ ಅಧಿಕಾರಿ, ಡಾ:ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಜಗಳೂರು ತಾಲ್ಲೂಕು, ದಾವಣಗೆರೆ (ಹಾಲಿ ನಿವೃತ್ತ), ಮತ್ತು (2) ಶ್ರೀ..ವಿ.ದೇಮಯ್ಯ, ಜಿಲ್ಲಾ ವ್ಯವಸ್ಥಾಪಕರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ದಾವಣಗೆರೆ ಜಿಲ್ಲೆ, ಇವರ ವಿರುದ್ಧದ ನಡವಳಿ ಕುರಿತು.

******

1. ಶ್ರೀ.ಎಂ.ಹೆಚ್.ವೆಂಕಟೇಶ್ ಬಿನ್ ಹನುಮಂತಪ್ಪ, ಮಚ್ಚನೂರು ಗ್ರಾಮ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಸರ್ಕಾರಿ/ಸಾರ್ವಜನಿಕ ನೌಕರರಾದ (1) ಶ್ರೀ.ರೆಡ್ಡಿನಾಯಕ್, ಹಿಂದಿನ ತಾಲ್ಲೂಕು ಅಭಿವೃದ್ಧಿ ಅಧಿಕಾರಿ, ಡಾ:ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಜಗಳೂರು ತಾಲ್ಲೂಕು, ದಾವಣಗೆರೆ (ಹಾಲಿ ನಿವೃತ್ತ), ಮತ್ತು (2) ಶ್ರೀ..ವಿ.ದೇಮಯ್ಯ, ಜಿಲ್ಲಾ ವ್ಯವಸ್ಥಾಪಕರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ದಾವಣಗೆರೆ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ಈ ಪ್ರಕರಣದಲ್ಲಿ ದಾವಣಗೆರೆ ಜಿಲ್ಲೆ, ಚಳ್ಳಕೆರೆ ತಾಲ್ಲೂಕಿನಲ್ಲಿ 2012-13ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆಯಲ್ಲಿ ವೈಯಕ್ತಿಕ ನೀರಾವರಿ ಸೌಲಭ್ಯಕ್ಕಾಗಿ ಸುಮಾರು 53 ಕೊಳವೆ ಬಾವಿಗಳನ್ನು ಕೊರೆಸಲು ಜಗಳೂರು ವಿಧಾನಸಭೆ ಕ್ಷೇತ್ರಕ್ಕೆ ಮಂಜೂರಾಗಿದ್ದು, ಆ ಪೈಕಿ ಕೊರೆದಿರುವ 47 ಕೊಳವೆ ಬಾವಿಗಳು ಸಫಲವಾಗಿಲ್ಲದಿದ್ದರೂ ಸಹ ಸಫಲವಾಗಿವೆಯೆಂದು ದಾಖಲೆಗಳನ್ನು ಸೃಷ್ಟಿಸಿ ಬೋರ್‌ವೆಲ್ ಏಜೆನ್ಸಿಯವರ ಜೊತೆ ಸೇರಿ ಹಣವನ್ನು ದುರುಪಯೋಗಪಡಿಸಲಾಗಿದೆ. ಸುಮಾರು 300 ಅಡಿಗಳಿಗೂ ಹೆಚ್ಚು ಕೊಳವೆ ಬಾವಿಗಳನ್ನು ಕೊರೆದಿರುವುದಾಗಿ ನಕಲಿ ದಾಖಲೆ ಸೃಷ್ಟಿಸಿ ನೀರು ಬೀಳದೇ ಇದ್ದರೂ ಸಹ ನೀರಿದೆ ಎಂದು ಗ್ರಾಮಸ್ಥರು ಒಪ್ಪಿಗೆ ಸಹಿ ಹಾಕಿದಲ್ಲಿ ಅವರಿಗೆ ಪಂಪು, ಮೋಟಾರ್ ಮತ್ತು ವಿದ್ಯುತ್ ಸೌಲಭ್ಯ ಕಲ್ಪಿಸಿಕೊಡುತ್ತೇವೆಂದು ಎದುರುದಾರರು ಅಮಾಯಕರನ್ನು ದಾರಿ ತಪ್ಪಿಸಿ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ. ಈ ರೀತಿಯಲ್ಲಿ ಅಕ್ರಮ ನಡೆಸಿ ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿ ಏಜೆನ್ಸಿಯವರಿಂದ ಹಣ ಪಡೆದು ಅವರ ಅನುಕೂಲಕ್ಕೆ ತಕ್ಕಂತೆ

ಅಧಿಕಾರ ದುರುಪಯೋಗ ಪಡಿಸಿಕೊಂಡು ಸರ್ಕಾರದ ಅನುದಾನವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3 ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಇವರಿಗೆ ಆದೇಶಿಸಲಾಗಿತ್ತು. ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಇವರು ವರದಿಯನ್ನು ಸಲ್ಲಿಸಿದ್ದು, ವರದಿಯನ್ನು ಪರಿಶೀಲಿಸಿದಾಗ ಈ ಕೆಳಗಿನಂತೆ ಅಭಿಪ್ರಾಯ ನೀಡಿರುವುದು ಕಂಡುಬರುತ್ತದೆ.

i. 2012-13ನೇ0020ಸಾಲಿನಲ್ಲಿ ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಲ್ಲಿ ಜಗಳೂರು ತಾಲ್ಲೂಕಿಗೆ ಸರ್ಕಾರ ಮೀಸಲಿರಿಸಿರುವ 53 ಗುರಿಯಲ್ಲಿ 45 ಸಫಲ 8 ವಿಫಲ ಕೊಳವೆ ಬಾವಿಗಳಾಗಿದ್ದು, ಆದರೆ ದಾವಣಗೆರೆ ಜಿಲ್ಲೆಯ ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧಿಕಾರಿಗಳಾದ ಶ್ರೀ.ದೇವಯ್ಯ, ಜಿಲ್ಲಾ ವ್ಯವಸ್ಥಾಪಕರು, ಶ್ರೀ.ರೆಡ್ಡಿನಾಯಕ್, ಜಗಳೂರು ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಸೇರಿಕೊಂಡು 47 ಸಫಲ 6 ವಿಫಲ ಕೊಳವೆ ಬಾವಿ ಅಂತ ಸರ್ಕಾರಕ್ಕೆ ವರದಿ ನೀಡಿ ಹಣ ಮಂಜೂರು ಮಾಡಿ ಸರ್ಕಾರಕ್ಕೆ ನಷ್ಟವುಂಟು ಮಾಡಿರುವುದು ವಿಚಾರಣಾ ವರದಿಯಲ್ಲಿ ಕಂಡುಬರುತ್ತದೆ.

ii. ಸರ್ಕಾರದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊಳವೆ ಬಾವಿಯ ಫಲಾನುಭವಿಯಾಗಲು ತಿಮ್ಮಪ್ಪ ತಂದೆ ಬಡಗಿ ಗುರ್‍ರಪ್ಪ ಇವರ ಹೆಸರಿನಲ್ಲಿ ಅರ್ಜಿಯನ್ನು ಸಲ್ಲಿಸಿ, ಬಡಗಿ ಗುರ್‍ರಪ್ಪ ಎಂಬುವರಿಗೆ ಸೇರಿದ ಮಚ್ಚನೂರು ಗ್ರಾಮದ ಸ.ನಂ.39 ರ ಪಹಣಿ ಹಾಗೂ ನಕಲಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ನೀಡಿದ್ದರೂ ಸಹ ಇ.ದೇಮಯ್ಯ ಇವರು ದಾಖಲಾತಿಗಳನ್ನು ಸರಿಯಾಗಿ ಪರಿಶೀಲನೆ ಮಾಡದೆ ಗಂಗಾ ಕಲ್ಯಾಣ ಯೋಜನೆಯ ಲಾಭ ಪಡೆದುಕೊಳ್ಳಲು ತಿಮ್ಮಪ್ಪ ಎಂಬುವರ ಹೆಸರಿನಲ್ಲಿ ಕಾರ್ಯಾದೇಶ ನೀಡಿರುವುದು ಕಂಡುಬರುತ್ತದೆ.

iii. ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಮಂಜೂರಾದ ಕೊಳವೆ ಬಾವಿಯನ್ನು ಮಚ್ಚನೂರು ಗ್ರಾಮದ ಸ.ನಂ.39 ರಲ್ಲಿ ಕೊರೆಸಬೇಕಾಗಿದ್ದು, ಅದನ್ನು ಅಲ್ಲಿ ಕೊರೆಸದೆ ಶ್ರೀ.ರೆಡ್ಡಿನಾಯಕ್ ಇವರ ಸಮಕ್ಷಮದಲ್ಲಿ ಚಿತ್ರದುರ್ಗ ತಾಲ್ಲೂಕು ಬರಮಸಾಗರ ಹೋಬಳಿ, ಕೋಗುಂಡೆ ಗ್ರಾಮದ ಸ.ನಂ.182 ಚೌಡಪ್ಪ ತಂದೆ ಬಡಗಿ ಗುರ್‍ರಪ್ಪ ಇವರ ಜಮೀನಿನಲ್ಲಿ ಕೊರೆಯಿಸಿ ರಾಜಣ್ಣ ತಂದೆ ಸಣ್ಣಚೌಡಪ್ಪ ರವರ ಜೊತೆ ಫೋಟೋ ತೆಗೆಸಿಕೊಂಡು ಸದರಿ ಕೊಳವೆ ಬಾವಿಯನನು ಮಚ್ಚನೂರು ಗ್ರಾಮದ ಸ.ನಂ.39 ರಲ್ಲಿ ಕೊರೆಯಿಸಿದ ಹಾಗೆ ದಾಖಲೆಗಳನ್ನು ಸೃಷ್ಟಿ ಮಾಡಿದ್ದು, ಸದರಿ ನಕಲಿ ದಾಖಲೆಗಳಾಧ ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ, ಸಣ್ಣ ಹಿಡುವಳಿದಾರರ ಪತ್ರಗಳನ್ನು ರಾಜಣ್ಣ ತಂದೆ ಸಣ್ಣ ಚೌಡಪ್ಪ, ಮಚ್ಚನೂರು ಗ್ರಾಮ, ಜಗಳೂರು ತಲ್ಲೂಕು, ದಾವಣಗೆರೆ ಜಿಲ್ಲೆ ಇವರು ಸೃಷ್ಟಿ ಮಾಡಿ ಅಂಬೇಡ್ಕರ್ ನಿಗಮಕ್ಕೆ ಸಲ್ಲಿಸಿ ಕೊಳವೆ ಬಾವಿಯನ್ನು ತನ್ನ ತಂದೆ ಚೌಡಪ್ಪ ಇವರ ಜಮೀನಾದ ಚಿತ್ರದುರ್ಗ ತಲ್ಲೂಕು, ಬಮರಸಾಗರ ಹೋಬಳಿ ಕೋಗುಂಡೆ ಗ್ರಾಮದ ರಿ.ಸ.ನಂ.182 ರಲ್ಲಿ ಕೊರೆಯಿಸಿ ರೆಡ್ಡಿನಾಯಕ್ ಇವರ ಜೊತೆ ಫೋಟೋ ತೆಗೆಸಿಕೊಂಡು ಸರ್ಕಾರಕ್ಕೆ ಮೋಸ ಮಾಡಿರುವುದು ತಿಳಿದುಬರುತ್ತದೆ.

iv. ರಾಜಣ್ಣ ತಂದೆ ಸಣ್ಣ ಚೌಡಪ್ಪ, ಮಚ್ಚನೂರು ಗ್ರಾಮ ಜಗಳೂರು ತಲ್ಲೂಕು ದಾವಣಗೆರೆ ಜಿಲ್ಲೆ ಇವರು ಗಂಗಾ ಕಲ್ಯಾಣ ಯೋಜನೆಯ ಲಾಭ ಪಡೆಯುವ ಉದ್ದೇಶದಿಂದ ಅವರ ಸಂಬಂಧಿಕರಾದ ಗುರ್‍ರಪ್ಪ ಬಡಗಿ ಬಿನ್ ತಿಮ್ಮಪ್ಪ ಎಂಬುವರು ಮೃತಪಟ್ಟಿದ್ದರೂ ಸಹ ಅವರ ಹೆಸರಿನಲ್ಲಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಹಾಗೂ ಸಣ್ಣ/ಅತಿಸಣ್ಣ ಹಿಡುವಳಿದಾರ ದೃಢೀಕರಣ ಪತ್ರಗಳ ನಕಲಿ ದಾಖಲೆಗಳನ್ನು ಸೃಷ್ಟಿಸಿ ಡಾ:ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಸಲ್ಲಿಸಿರುವುದು ಕಂಡುಬರುತ್ತದೆ. ಜಗಳೂರು ತಲ್ಲೂಕು ತಹಶಿಲ್ದಾರ್‌ರವರು ತಾವು ಗುರ್‍ರಪ್ಪ

ಬಡಗಿಯವರ ಹೆಸರಿಗೆ ಸದರಿ ಪ್ರಮಾಣ ಪತ್ರಗಳನ್ನು ನೀಡಿರುವುದಿಲ್ಲವೆಂದು ವರದಿ ನೀಡಿರುವುದು ತಿಳಿದು ಬರುತ್ತದೆ.

v. ಶ್ರೀಮತಿ.ಎ.ಕೆ.ಕೆಂಚಮ್ಮ ಕೋಂ ಲೇಟ್.ಸಿದ್ದಪ್ಪ, ಅಣಬೂರು ಗ್ರಾಮ ಇವರಿಗೆ ಸೇರಿದ ರಿ.ಸ.ನಂ.226 ರಲ್ಲಿ 2 ಕೊಳವೆ ಬಾವಿಗಳನ್ನು ಕೊರೆಯಿಸಿದ್ದರೂ ನೀರು ಬಿದ್ದಿರುವುದಿಲ್ಲ. ಅವುಗಳನ್ನು ಹಾಲಿ ಮುಚ್ಚಲಾಗಿದ್ದು, ಕೊಳವೆ ಬಾವಿ ವಿಫಲವಾಗಿದ್ದರೂ ಸಹ ಸಫಲವೆಂದು ಎದುರುದಾರರು ಹಣ ಮಂಜೂರಿ ಮಾಡಿ ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವುದು ಕಂಡುಬರುತ್ತದೆ.

vi. ಶ್ರೀಮತಿ.ಗುರ್ರಮ್ಮ ಕೋಂ ಅಂಗಡಿ ತಿಮ್ಮಣ್ಣ, ಧರ್ಮಪುರ ವಾಸಿ ಇವರಿಗೆ ಸೇರಿದ ಓಬಳಾಪುರ ಗ್ರಾಮದ ರಿ.ಸ.ನಂ.24/1 ರಲ್ಲಿ ಕೊಳವೆ ಬಾವಿ ಕೊರೆಯಿಸಿದ್ದು, ನೀರು ಬಿದ್ದಿರುವುದಿಲ್ಲವಾದರೂ ಸಹ ವಿಫಲ ಕೊಳವೆ ಬಾವಿಗೆ ಸಫಲ ಎಂದು ಎದುರುದಾರರು ಹಣ ಮಂಜೂರು ಮಾಡಿ ಸರ್ಕಾರಕ್ಕೆ ನಷ್ಟವುಂಟುಮಾಡಿರುತ್ತಾರೆ.

vii. ಶ್ರೀ.ಮಲ್ಲೇಶಿ ತಂದೆ ತಿಪ್ಪೇಸ್ವಾಮಿ, ಮರಿಕುಂಟೆ ಗ್ರಾಮ ಇವರಿಗೆ ಸೇರಿದ ರಿ.ಸ.ನಂ.24/13 ರಲ್ಲಿ ಕೊಳವೆ ಬಾವಿ ಕೊರೆಸದೆ ಅದರ ಬದಲಿಗೆ ರಿ.ಸ.ನಂ.24/27 ರಲ್ಲಿ ಕೊಳವೆ ಬಾವಿ ಕೊರೆಸಿ ಕರ್ತವ್ಯದಲ್ಲಿ ನಿರ್ಲಕ್ಷ್ಯತನ ತೋರಿಸಿರುತ್ತಾರೆ.

viii. ಶ್ರೀ.ರುದ್ರಪ್ಪ ತಂದೆ ಕೆಂಚಪ್ಪ, ಗೌಡಗೊಂಡನಹಳ್ಳಿ ಗ್ರಾಮ ಎಂಬುವರಿಗೆ ಬೋರ್ ಮಂಜೂರಾಗಿದ್ದು, ಆದರೆ ಅವರ ಹೆಸರಿನಲ್ಲಿ ಜಮೀನು ಇರುವುದಿಲ್ಲ. ಜಮೀನು ಅವರ ಮಗನಾದ ಕೆ.ಆರ್.ಗಿರೀಶ್ ಇವರ ಹೆಸರಿನಲ್ಲಿ ಸ.ನಂ.58 ರಲ್ಲಿದ್ದು, ಅವರು ಸಣ್ಣ ಹಿಡುವಳಿದಾರರಾಗಿರುವುದಿಲ್ಲ. ಆದರೂ ಸಹ ಅವರಿಗೆ ಬೋರ್‌ವೆಲ್ ಮಂಜೂರು ಮಾಡಿ ಕಾರ್ಯಾದೇಶ ನೀಡಿ ಕರ್ತವ್ಯ ನಿರ್ಲಕ್ಷ್ಯತನ ವಹಿಸಿರುತ್ತಾರೆ.

4. ಗಂಗಾ ಕಲ್ಯಾಣ ಯೋಜನೆಯ ಅಕ್ರಮದಲ್ಲಿ ಶ್ರೀ.ರೆಡ್ಡಿನಾಯಕ್, ಹಿಂದಿನ ಜಗಳೂರು ತಾಲ್ಲೂಕು ಅಭಿವೃದ್ಧಿ ಅಧಿಕಾರಿ, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಶ್ರೀ.ವಿ.ದೇಮಯ್ಯ, ಜಿಲ್ಲಾ ವ್ಯವಸ್ಥಾಪಕರು, ಮತ್ತು ಶ್ರೀ.ರಾಜಣ್ಣ, ವ್ಯವಸಾಯ ವೃತ್ತಿ, ಮಚ್ಚನೂರು ಗ್ರಾಮ ಇವರುಗಳು ಭಾಗಿಯಾಗಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ.

5. ಶ್ರೀ.ರಾಜಣ್ಣ ಇವರು ಖಾಸಗಿ ವ್ಯಕ್ತಿಯಾಗಿರುವುದರಿಂದ, ಅವರಿಂದ ಆಕ್ಷೇಪಣೆ ತರಿಸಲಾಗಿರುವುದಿಲ್ಲ. ಆದರೆ, ಶ್ರೀ.ರೆಡ್ಡಿನಾಯಕ್ ಮತ್ತು ಶ್ರೀ.ವಿ.ದೇಮಯ್ಯ ಇವರಿಂದ ಆಕ್ಷೇಪಣೆಯನ್ನು ತರಿಸಲು ಆದೇಶವಾಗಿತ್ತು. ಆ ಪ್ರಕಾರ 1 ಮತ್ತು 2ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

6. 1ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ತಿಮ್ಮಪ್ಪ ಬಿನ್ ಬಡಗಿ ಗುರ್ರಪ್ಪ ಎನ್ನುವವರ ಹೆಸರಿನಲ್ಲಿ ಕೊಳವೆ ಬಾವಿ ಕೊರೆಯಲು ಕಾರ್ಯಾದೇಶವಾಗಿರುತ್ತದೆ. ಆದರೆ, ಸದರಿಯವರ ಹೆಸರಿನಲ್ಲಿ ಜಮೀನು ಇರದೆ ಅವರು ಪೌತಿಯಾಗಿದು, ಅವರ ಖಾಸಾ ತಮ್ಮನಾದ ಚೌಡಪ್ಪ ಇವರಿಗೆ ಸೇರಿದ ಚಿತ್ರದುರ್ಗ ತಾಲ್ಲೂಕು, ಬರಮಸಾಗರ ಹೋಬಳಿ, ಸ.ನಂ.182 ರ ಜಮೀನಿಗೆ ಕೊಳವೆ ಬಾವಿ ಹಾಕಿಸಲಾಗಿದೆ. ಯೋಜನೆಯ ಲಾಭವನ್ನು ಬಿಟ್ಟುಕೊಡದೆ ಬೇರೆಯವರಿಗೆ ವರ್ಗಾವಣೆಯಾಗಬಹುದೆಂಬ ಸ್ಪರ್ಧಾತ್ಮಕ ವಾತಾವರಣದಲ್ಲಿ ಸದರಿ ಅಣ್ಣತಮ್ಮಂದಿರೆಲ್ಲರೂ ಸೇರಿ ಆ ಸೌಲಭ್ಯವನ್ನು ತಾವೇ ಪಡೆಯಲು ಅವರನ್ನು ತಪ್ಪುದಾರಿಗೆ ಕೊಂಡೊಯ್ದಿರುತ್ತಾರೆ. ಆದರೆ ಪರಿಶಿಷ್ಟ ಜಾತಿ ಅಲ್ಲದವರಿಗೆ ಸೌಲಭ್ಯ ನೀಡಿರುವುದಿಲ್ಲ. ಪರಿಶಿಷ್ಟ ಜಾತಿಯವರ ಜಮೀನಿನಲ್ಲೇ ಕೊಳವೆ ಬಾವಿ ಕೊರೆಸಲಾಗಿದೆ. ಆದ್ದರಿಂದ, ಯೋಜನೆಯ ಗುರಿ, ಉದ್ದೇಶಗಳಿಗೆ ಚ್ಯುತಿ

ಬಾರದಂತೆ ಯೋಜನೆಯ ನಿಯಮಗಳನ್ನು ಉಲ್ಲಂಘಿಸದಂತೆ ಅನುಷ್ಠಾನಗೊಳಿಸಲಾಗಿದೆ. ಮಲ್ಲೇಶಿ ಬಿನ್ ತಿಪ್ಪೇಸ್ವಾಮಿ ಇವರ ಒಟ್ಟು ಕುಟುಂಬದಲ್ಲಿ ಅವರ ಸಹೋದರರಾದ ನಾಗರಾಜ, ಮಂಜಪ್ಪ, ಬಸವರಾಜು ಮತ್ತು ಅಜ್ಜಪ್ಪ ಎಂಬುವರು ಇದ್ದು, ಅವರು ಸತ್ಯವನ್ನು ಮರೆಮಾಚಿ ಬೇರೆ ಜಮೀನನ್ನು ತಮ್ಮದೆಂದು ವಾದಿಸಿ ನಂಬಿಸಿ ಕೊಳವೆ ಬಾವಿ ಕೊರೆಸಿಕೊಂಡಿರುತ್ತಾರೆ. ಶ್ರೀ.ರುದ್ರಪ್ಪ ಮತ್ತು ಗಿರೀಶ್‌ರವರು ಒಂದೇ ಕುಟುಂಬದವರಾಗಿದ್ದು, ಅವಿಭಾಜ್ಯವಾಗಿ ಜಮೀನನ್ನು ಬಳಸಿಕೊಳ್ಳುತ್ತಿದ್ದು, ಮತ್ತು ಅದು ಪಿತ್ರಾರ್ಜಿತ ಆಸ್ತಿಯಾದ ಕಾರಣ ಹಾಗೂ ಜಮೀನು ಸಣ್ಣ ಹಿಡುವಳಿದಾರರ ಮಿತಿಯೊಳಗೆ ಬರುವ ಕಾರಣ ಅವರಿಗೆ ಸೌಲಭ್ಯ ನೀಡಲಾಗಿದೆ. ವಿಫಲ ಎಂದು ಹೇಳಲಾದ 2 ಬೋರ್‌ವೆಲ್‌ಗಳನ್ನು ಹೆಚ್ಚಿನ ನೀರು ತೆಗೆಯಲು ಆಳವಾಗಿ ಕೊರೆಸಲಾಗಿದೆ. ಆ ಎರಡರಲ್ಲೂ ನೀರಿನ ಪ್ರಮಾಣ ಹೆಚ್ಚಿಗೆ ಇಲ್ಲದಿದ್ದರೂ ಹನಿ ನೀರಾವರಿ/ಮಿತ ನೀರಾವರಿ/ಅರೆ ನೀರಾವರಿಗೆ ಅನುಕೂಲವಾಗುವಷ್ಟು ನೀರಿನ ಇಳುವರಿ ಬರುತ್ತದೆ. ಅದನ್ನು ಅಪಾರ್ಥ ಮಾಡಿಕೊಂಡು ವಿಫಲ ಎಂದು ಹೆಸರು ಕೊಟ್ಟಿರುತ್ತಾರೆ. ಆದ್ದರಿಂದ, ದೂರುದಾರರ ಆರೋಪವು ಉದ್ದೇಶಪೂರಿತವಾಗಿ ಸೃಷ್ಟಿ ಮಾಡಿಕೊಂಡು ಯಾವುದೋ ದುರುದ್ದೇಶದಿಂದ ಕೂಡಿರುತ್ತದೆಯೆಂದು ಹೇಳಿರುತ್ತಾರೆ.

7. 2ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಸಂಬಂಧಿಸಿದ ಮತ ಕ್ಷೇತ್ರದ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಜರುಗುವ ಆಯ್ಕೆ ಸಮಿತಿ ಸಭೆಯಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯು ಜರುಗುತ್ತದೆ. ಸದರಿ ಸಮಿತಿಗೆ ನಿಗಮದ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ಫಲಾನುಭವಿಗಳು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿ ಫಲಾನುಭವಿಗಳು ಅರ್ಹ/ಅನರ್ಹರೆಂದು ವರದಿ ನೀಡುವ ಮತ್ತು ಸೌಲಭ್ಯಕ್ಕೆ ಶಿಫಾರಸ್ಸು ಮಾಡುವ ಅಧಿಕಾರ ಸದಸ್ಯ ಕಾರ್ಯದರ್ಶಿ ಹೊಂದಿರುತ್ತಾರೆ. ಅದರಂತೆ 2012–13ನೇ ಸಾಲಿನಲ್ಲಿ ನಡೆದ ಕೊಳವೆ ಬಾವಿಗಳ ಪೈಕಿ 47 ಕೊಳವೆ ಬಾವಿಗಳು ಸಫಲವಾಗಿರುತ್ತವೆ. ತದನಂತರ ಅಂತರ್ಜಲದ ಲಭ್ಯತೆ ಆಧಾರದ ಮೇಲೆ ಆದಂತಹ ವ್ಯತ್ಯಾಸದ ಬಗ್ಗೆ ತಾಲ್ಲೂಕು ಅಭಿವೃದ್ಧಿ ಅಧಿಕಾರಿ ಯಾವುದೇ ವರದಿ ನೀಡಿರುವುದಿಲ್ಲ. ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಫಲಾಪೇಕ್ಷಿಗಳಿಂದ ಪೂರ್ಣ ಪ್ರಮಾಣದ ದಾಖಲಾತಿಗಳನ್ನು ಪಡೆದು ಕಚೇರಿಗೆ ಸಲ್ಲಿಸಿದ ನಂತರ ಕೊಳವೆ ಬಾವಿ ಕೊರೆಯಲು ತಾಲ್ಲೂಕು ಅಭಿವೃದ್ಧಿ ಅಧಿಕಾರಿಯವರಿಗೆ ಸೂಚಿಸಲಾಗಿರುತ್ತದೆ. ಅರ್ಹತೆಯ ಆಧಾರದ ಮೇಲೆ ಗಂಗಾ ಕಲ್ಯಾಣ ಯೋಜನೆಯಡಿ ಸೌಲಭ್ಯ ಕಲ್ಪಿಸಲಾಗಿದ್ದು, ಸರ್ಕಾರಕ್ಕೆ ಯಾವುದೇ ರೀತಿಯ ನಷ್ಟವುಂಟು ಮಾಡಿರುವುದಿಲ್ಲವೆಂದು ಹೇಳಿರುತ್ತಾರೆ.

8. ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, 2012–13ನೇ ಸಾಲಿನಲ್ಲಿ ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿಗೆ ಗಂಗಾ ಕಲ್ಯಾಣ ಯೋಜನೆಯಡಿ ಸರ್ಕಾರ ಮೀಸಲಿರಿಸಿರುವ 53 ಗುರಿಯಲ್ಲಿ 45 ಸಫಲ ಹಾಗೂ 8 ವಿಫಲ ಕೊಳವೆ ಬಾವಿ ಕೊರೆಸಿದ್ದರೂ ಸಹ 47 ಸಫಲ 6 ವಿಫಲವೆಂದು ತಿಳಿಸಿ ಸರ್ಕಾರದ ಹಣ ಮಂಜೂರು ಮಾಡಿದ್ದು, ಇದರಲ್ಲಿ 2 ವಿಫಲವಾದ ಬೋರ್‌ವೆಲ್‌ಗಳ ಹಣ ಸಂದಾಯ ಮಾಡಿ ಸರ್ಕಾರಕ್ಕೆ ನಷ್ಟವುಂಟು ಮಾಡಿರುತ್ತಾರೆ ಹಾಗೂ ಆಯ್ಕೆಯಾದ ಜಮೀನನ್ನು

ಬಿಟ್ಟು ಬೇರೆ ಜಮೀನಿನಲ್ಲಿ ಕೊಳವೆ ಬಾವಿಯನ್ನು ಕೊರೆಯಿಸಿರುವುದು ಮತ್ತು ನಕಲಿ ದಾಖಲೆಗಳನ್ನು ಸೃಷ್ಟಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ತನಿಖಾಧಿಕಾರಿಯ ವರದಿಯ ಮೇಲೆ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯಲ್ಲಿ ವರದಿಯಲ್ಲಿ ತಿಳಿಸಿದ ಲೋಪಗಳಿಗೆ ಸಂಬಂಧಪಟ್ಟಂತೆ ಸೂಕ್ತವಾದ ಸ್ಪಷ್ಟೀಕರಣವನ್ನು ಎದುರುದಾರರು ನೀಡಿರುವುದಿಲ್ಲ. ಸದರಿ ಅಂಶಗಳನ್ನು ಗಮನಿಸಿದಾಗ, ಎದುರುದಾರರು ಕರ್ತವ್ಯಲೋಪ ಎಸಗಿರುವುದು ಮತ್ತು ಅಧಿಕಾರ ದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

9. ದೂರಿಗೆ ಸಂಬಂಧಪಟ್ಟಂತೆ ದಿ.7/3/17 ರಂದು ಗೌರವಾನ್ವಿತ ಉಪಲೋಕಾಯುಕ್ತರ ದಾವಣಗೆರೆ ಪ್ರವಾಸದ ಸಂದರ್ಭದಲ್ಲಿ ಸಣ್ಣ ನೀರಾವರಿ ಇಲಾಖೆ ಮತ್ತು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇವರಿಗೆ ಸಂಬಂಧಪಟ್ಟಂತೆ ಕೊರೆದಿರುವ ಕೊಳವೆ ಬಾವಿಗಳ ವಿವರ ನೀಡುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಹಾಗೂ ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊರೆಯಿಸಿರುವ ಕೊಳವೆ ಬಾವಿಗಳ ವಿವರ ನೀಡುವಂತೆ ಆದೇಶಿಸಲಾಗಿತ್ತು. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಹಾಗೂ ಅಂಬೇಡ್ಕರ್ ಅಭಿವೃದ್ಧಿ ನಿಗಮ, ಇವರು ವಿವರಗಳನ್ನು ಸಲ್ಲಿಸಿರುತ್ತಾರೆ.

10. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಹಾಗೂ ಡಾಅಂಬೇಡ್ಕರ್ ಅಭಿವೃದ್ಧಿ ನಿಗಮ ಇವರು ಸಲ್ಲಿಸಿರುವ ವಿವರಗಳನ್ನು ಪರಿಶೀಲಿಸಿದಾಗ, ದಿ.25/6/2013 ರಂದು ಆರ್.ಆರ್.ಪಿ.ರಾಕ್ ಡೀಲರ್ಸ್ ಚನ್ನಗಿರಿ ಏಜನ್ಸಿಯವರು ದಿ.,25/6/13 ರಂದು ಚನ್ನಗಿರಿ ತಾಲ್ಲೂಕಿನಲ್ಲಿ 9 ಕೊಳವೆ ಬಾವಿಗಳು ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಹಾಗೂ ದಿ.29/7/2013 ರಲ್ಲಿ ಚನ್ನಗಿರಿ ತಾಲ್ಲೂಕಿನಲ್ಲಿ 29 ಕೊಳವೆ ಬಾವಿಗಳನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆಯಡಿಯಲ್ಲಿ ಕೊರೆದಿರುವುದು ಕಂಡುಬರುತ್ತದೆ.

11. ವಿನಾಯಕ ಬೋರ್‌ವೆಲ್ಸ್, ದಾವಣಗೆರೆ ಏಜೆನ್ಸಿಯವರು ದಿ.19/8/2013 ರಂದು 12 ಕೊಳವೆ ಬಾವಿಗಳು ಹಾಗೂ 28/8/2013 ರಂದು 6 ಕೊಳವೆ ಬಾವಿಗಳನ್ನು ದಾವಣಗೆರೆ ಜಿಲ್ಲೆಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆಯಡಿಯಲ್ಲಿ ಕೊರೆದಿರುವುದು ಕಂಡುಬರುತ್ತದೆ.

12. ಶ್ರೀ.ಸಿಂಧು ಬೋರ್‌ವೆಲ್ಸ್ ಏಜೆನ್ಸಿಯವರು ದಿ.30/9/2013 ರಂದು 9 ಕೊಳವೆ ಬಾವಿಗಳು, ದಿ.,10/10/13 ರಂದು 7 ಕೊಳವೆ ಬಾವಿಗಳು, ದಿ.15/10/13 ರಂದು 24 ಕೊಳವೆ ಬಾವಿಗಳು, ದಿ.24/2/14 ರಂದು 7 ಕೊಳವೆ ಬಾವಿಗಳು, ದಿ.25/2/14 ರಂದು 9 ಕೊಳವೆ ಬಾವಿಗಳು, ದಿ.,15/3/14 ರಂದು 6 ಕೊಳವೆ ಬಾವಿಗಳನ್ನು ಜಗಳೂರು ತಾಲ್ಲೂಕಿನಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆಯಡಿಯಲ್ಲಿ ಕೊರೆದಿರುವುದು ಕಂಡುಬರುತ್ತದೆ.

13. ಯಮುನಾ ಡ್ರಿಲ್ಲಿಂಗ್ ಎಂಟರ್‌ಪ್ರೈಸಸ್ ಹರಪನಹಳ್ಳಿ ಇವರು ದಿ.6/12/13 ರಂದು 5 ಕೊಳವೆ ಬಾವಿಗಳನ್ನು, ಹಾಗೂ ದಿ.13/12/14 ರಂದು 6 ಕೊಳವೆ ಬಾವಿಗಳನ್ನು ದಾವಣಗೆರೆ

ತಾಲ್ಲೂಕಿನಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆಯಡಿಯಲ್ಲಿ ಕೊರೆದಿರುವುದು ಕಂಡುಬರುತ್ತದೆ.

14. ಶ್ರೀನಿವಾಸ್ ಬೋರ್‌ವೆಲ್ ಏಜೆನ್ಸಿಯವರು ದಿ.25/3/2015 ರಂದು 18 ಬೋರ್‌ವೆಲ್‌ಗಳನ್ನು ಹಾಗೂ ದಿ.27/3/15 ರಂದು 17 ಬೋರ್‌ವೆಲ್‌ಗಳನ್ನು ಹರಪನಹಳ್ಳಿ ತಾಲ್ಲೂಕಿನಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆಯಡಿಯಲ್ಲಿ ಕೊರೆದಿರುವುದು ಕಂಡುಬರುತ್ತದೆ.

15. ಸೂಜಿ ಮಲ್ಲೇಶ್ವರ ಬೋರ್‌ವೆಲ್ಸ್, ಚಳ್ಳಕೆರೆ ಇವರು ದಿ.15/6/2014 ರಂದು 7 ಕೊಳವೆ ಬಾವಿಗಳು, ದಿ.7/8/2014 ರಂದು 12 ಕೊಳವೆ ಬಾವಿಗಳು, ದಿ.8/8/14 ರಂದು 7 ಕೊಳವೆ ಬಾವಿಗಳು, ದಿ.15/1/2014 ರಂದು 10 ಕೊಳವೆ ಬಾವಿಗಳು, ದಿ.18/2/14 ರಂದು 7 ಕೊಳವೆ ಬಾವಿಗಳು, ದಿ.2/1/15 ರಂದು 8 ಕೊಳವೆ ಬಾವಿಗಳು, ದಿ.11/1/15 ರಂದು 15 ಬೋರ್‌ವೆಲ್‌ಗಳು, ದಿ.12/1/15 ರಂದು 9 ಬೋರ್‌ವೆಲ್‌ಗಳು, ದಿ.16/1/15 ರಂದು 10 ಬೋರ್‌ವೆಲ್‌ಗಳು, ದಿ.20/1/15 ರಂದು 7 ಬೋರ್‌ವೆಲ್‌ಗಳು, ದಿ.21/1/15 ರಂದು 9 ಬೋರ್‌ವೆಲ್‌ಗಳು, ದಿ.20/1/15 ರಂದು 6 ಬೋರ್‌ವೆಲ್‌ಗಳನ್ನು ಚನ್ನಗಿರಿ ತಾಲ್ಲೂಕಿನಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆಯಡಿಯಲ್ಲಿ ಕೊರೆದಿರುವುದು ಕಂಡುಬರುತ್ತದೆ.

16. ಸಿಂಧು ಬೋರ್‌ವೆಲ್ಸ್, ಚಳ್ಳಕೆರೆ ಇವರು ದಿ.7/4/14 ರಂದು 12 ಕೊಳವೆ ಬಾವಿಗಳು, ಹಾಗೂ ದಿ.7/5/14 ರಂದು 27 ಬೋರ್‌ವೆಲ್‌ಗಳನ್ನು , ದಿ.3/5/14 ರಂದು 6 ಕೊಳವೆ ಬಾವಿಗಳನ್ನು ದಾವಣಗೆರೆ ತಾಲ್ಲೂಕಿನಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆಯಡಿಯಲ್ಲಿ ಕೊರೆದಿರುವುದು ಕಂಡುಬರುತ್ತದೆ.

17. ಕೆ.ಬಿ.ಮೋಹನ್, ವಿದ್ಯಾ ಬೋರ್‌ವೆಲ್ಸ್, ಗೊಲ್ಲರಹಳ್ಳಿ ಇವರು ದಿ.20/9/15 ರಂದು 8 ಬೋರ್‌ವೆಲ್‌ಗಳನ್ನು ಹೊನ್ನಾಳಿ ತಾಲ್ಲೂಕಿನಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆಯಡಿಯಲ್ಲಿ ಕೊರೆದಿರುವುದು ಕಂಡುಬರುತ್ತದೆ. ಕೊರೆದಿರುವುದು ಕಂಡುಬರುತ್ತದೆ.

18. ಸಕ್ತಿ ಪವರ್ ಡ್ರಿಲ್ಸ್, ಭದ್ರಾವತಿ ಇವರು ದಿ.7/3/15 ರಂದು 19, ದಿ.5/3/15 ರಂದು 6, ದಿ.22/12/15 ರಂದು 9, ದಿ.3/10/15 ರಂದು 7 ಬೋರ್‌ವೆಲ್‌ಗಳನ್ನು ಹೊನ್ನಾಳಿ ತಾಲ್ಲೂಕಿನಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆಯಡಿಯಲ್ಲಿ ಕೊರೆದಿರುವುದು ಕಂಡುಬರುತ್ತದೆ.

19. ಶ್ರೀನಿವಾಸ ಬೋರ್‌ವೆಲ್ ಏಜೆನ್ಸಿಯವರು ದಿ.25/3/15 ರಂದು 18 ಕೊಳವೆ ಬಾವಿಗಳು ದಿ.27/3/15 ರಂದು 17 ಕೊಳವೆ ಬಾವಿಗಳು ಹಾಗೂ 13/1/15 ರಂದು 5 ಕೊಳವೆ ಬಾವಿಗಳನ್ನು ಹರಪನಹಳ್ಳಿ ತಾಲ್ಲೂಕಿನಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆಯಡಿಯಲ್ಲಿ ಕೊರೆದಿರುವುದು ಕಂಡುಬರುತ್ತದೆ.

20. ಶಾಮನೂರು ಬೋರ್‌ವೆಲ್ಸ ಇವರು ದಿ.2/1215 ರಂದು 8 ಕೊಳವೆ ಬಾವಿಗಳು, 3/12/15 ರಂದು 6 ಕೊಳವೆ ಬಾವಿಗಳು ದಿ.10/12/15 ರಂದು 10 ಕೊಳವೆ ಬಾವಿಗಳು, ದಿ.5/12/15

ರಂದು 4 ಕೊಳವೆ ಬಾವಿಗಳನ್ನು ಹರಿಹರ ತಾಲ್ಲೂಕಿನಲ್ಲಿ ಮತ್ತು ದಿ.22/11/15 ರಂದು 9 ಕೊಳವೆ ಬಾವಿಗಳು, ದಿ.3/12/15 ರಂದು 10 ಕೊಳವೆ ಬಾವಿಗಳನ್ನು , ಹೊನ್ನಾಳಿ ತಾಲ್ಲೂಕಿನಲ್ಲಿ, ದಿ.3/12/15 ರಂದು 6 ಕೊಳವೆ ಬಾವಿಗಳನ್ನು ಹರಿಹರ ತಾಲ್ಲೂಕಿನಲ್ಲಿ, ದಿ.1/12/15 ರಂದು ತಲಾ 6 ಕೊಳವೆ ಬಾವಿಗಳನ್ನು ಚನ್ನಗಿರಿ ಮತ್ತು ದಾವಣಗೆರೆ ತಾಲ್ಲೂಕುಗಳಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆಯಡಿಯಲ್ಲಿ ಕೊರೆದಿರುವುದು ಕಂಡುಬರುತ್ತದೆ.

21. ಕೆ.ಬಿ.ಮೋಹನ್ ದಿವ್ಯಾ ಬೋರ್‌ವೆಲ್ಸ್, ಗೊಲ್ಲರಹಳ್ಳಿ ಇವರು ದಿ.5/5/14 ರಂದು 9 ಕೊಳವೆ ಬಾವಿಗಳು, 20/7/14 ರಂದು 15 ಕೊಳವೆ ಬಾವಿಗಳು, 21/7/14 ರಂದು 10 ಕೊಳವೆ ಬಾವಿಗಳು, ದಿ.13/5/14 ರಂದು 7 ಕೊಳವೆ ಬಾವಿಗಳು, ದಿ.13/4/14 ರಂದು 7 ಕೊಳವೆ ಬಾವಿಗಳು, ದಿ.22/7/14 ರಂದು 6 ಕೊಳವೆ ಬಾವಿಗಳು, ದಿ.19/7/14 ರಂದು 8 ಕೊಳವೆ ಬಾವಿಗಳನ್ನು ಹೊನ್ನಾಳಿ ತಾಲ್ಲೂಕಿನಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆಯಡಿಯಲ್ಲಿ ಕೊರೆದಿರುವುದು ಕಂಡುಬರುತ್ತದೆ.

22. ವೆಂಕಟೇಶ್ವರ ಬೋರ್‌ವೆಲ್ಸ್, ಪರಶುರಾಮಪುರ, ಚಳ್ಳಕೆರೆ ಇವರು ದಿ.14/2/14 ರಂದು 6 ಕೊಳವೆ ಬಾವಿಗಳನ್ನು ಹರಿಹರ ತಾಲ್ಲೂಕಿನಲ್ಲಿ, ದಿ.15/1/14 ರಂದು ಚನ್ನಗಿರಿ ತಾಲ್ಲೂಕಿನಲ್ಲಿ 6 ಕೊಳವೆ ಬಾವಿ ಮತ್ತು ದಾವಣಗೆರೆ ತಾಲ್ಲೂಕಿನಲ್ಲಿ 2 ಕೊಳವೆ ಬಾವಿಗಳನ್ನು, ದಿ.14/11/14 ರಂದು 8 ಕೊಳವೆ ಬಾವಿಗಳನ್ನು ಜಗಳೂರು ತಾಲ್ಲೂಕಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊರೆದಿರುವುದು ಕಂಡುಬರುತ್ತದೆ.

23. ಮೇಲಿನ ಅಂಶಗಳನ್ನು ಗಮನಿಸಿದಾಗ, ಒಂದೇ ದಿನದಲ್ಲಿ ಮೇಲೆ ಹೇಳಿದ ಸಂಖ್ಯೆಯ ಕೊಳವೆ ಬಾವಿಗಳನ್ನು ಕೊರೆದಿರುವುದು ಅನುಮಾನಕ್ಕೆ ಎಡೆಮಾಡಿಕೊಡುತ್ತದೆ. ಒಂದೇ ಯಂತ್ರದಿಂದ ಅಷ್ಟೊಂದು ಕೊಳವೆ ಬಾವಿಗಳನ್ನು ಕೊರೆಯಲು ಸಾಧ್ಯವಿಲ್ಲ. ಅಲ್ಲದೆ, ಡಾ:ಅಂಬೇಡ್ಕರ್ ಅಭಿವೃದ್ಧಿ ನಿಗಮ ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದವರು ನೀಡಿರುವ ವಿವರದ ಜೊತೆಗೆ ಸರ್ಕಾರದ ಸುತ್ತೋಲೆಯಂತೆ ಕೊಳವೆ ಬಾವಿ ಕೊರೆಸುವ ಮೊದಲು ಭೂವಿಜ್ಞಾನಿಯಿಂದ ಪಡೆದಿರುವ ವರದಿಯ ಬಗ್ಗೆ, ಸ್ಥಳದ ಭಾವಚಿತ್ರ, ಅಂದಾಜು ಪಟ್ಟಿ, ಕಾರ್ಯಾದೇಶ, ಕಾಮಗಾರಿ ಪೂರ್ಣಗೊಂಡ ಬಗ್ಗೆ ವರದಿ ಮತ್ತು ಕಾಮಗಾರಿ ಪೂರ್ಣಗೊಂಡ ನಂತರ ತೆಗೆದ ಭಾವಚಿತ್ರ, ಅಳತೆ ಪುಸ್ತಕದ ಪ್ರತಿ ಇತ್ಯಾದಿಗಳನ್ನು ಹಾಜರು ಪಡಿಸಿರುವುದಿಲ್ಲ. ಸದರಿ ದಾಖಲಾತಿಗಳ ಪರಿಶೀಲನೆಯ ಅಗತ್ಯತೆ ಕಂಡುಬಂದ ಕಾರಣ ದಾಖಲೆಗಳನ್ನು ಹಾಜರು ಪಡಿಸುವಂತೆ ಸಂಬಂಧಪಟ್ಟವರಿಗೆ ಆದೇಶಿಸಲಾಗಿತ್ತು.

24. ಜಿಲ್ಲಾ ವ್ಯವಸ್ಥಾಪಕರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ದಾವಣಗೆರೆ ಇವರು ದಾಖಲಾತಿಗಳನ್ನು ಸಲ್ಲಿಸಿದ್ದು, ದಾಖಲಾತಿಗಳನ್ನು ಪರಿಶೀಲಿಸಿದಾಗ, ಫಲಾನುಭವಿಗಳ ಪಟ್ಟಿ ಹಾಗೂ ಕೊಳವೆ ಬಾವಿಗಳನ್ನು ಕೊರೆದಿರುವ ವಿವರಗಳನ್ನು ಸಲ್ಲಿಸಿದ್ದು, ಸದರಿ ವಿವರದಲ್ಲಿ ಭೂ ವಿಜ್ಞಾನಿಯ ದೃಢೀಕರಣವನ್ನು ಪಡೆಯಲಾಗಿದೆ ಎಂದು ನಮೂದಿಸಿದ್ದು, ಎಲ್ಲಾ ಕೊಳವೆ ಬಾವಿಗಳು ಸಫಲವಾಗಿವೆ ಎಂದು ಪಟ್ಟಿಯಲ್ಲಿ ನಮೂದಿಸಿರುವುದು ಕಂಡುಬರುತ್ತದೆ.

25. ಕೊಳವೆ ಬಾವಿಯನ್ನು ಕೊರೆಯಿಸುವ ಮೊದಲು ಕ್ರಿಯಾ ಯೋಜನೆಯನ್ನು ತಯಾರಿಸಬೇಕಾಗಿದ್ದು, ಬೇಡಿಕೆಗೆ ಅನುಸಾರವಾಗಿ ಕೊಳವೆ ಬಾವಿಗಳನ್ನು ಕೊರೆಯಿಸಬೇಕಾಗುತ್ತದೆ. ನಂತರದಲ್ಲಿ ಯಾವ ಸ್ಥಳದಲ್ಲಿ ಕೊಳವೆ ಬಾವಿಯನ್ನು ಕೊರೆಯಬಹುದಾಗಿದೆಯೆಂದು ಭೂ ವಿಜ್ಞಾನಿ ಪರಿಶೀಲನೆ ನಡೆಸಿ ಒಂದು ವರದಿಯನ್ನು ನೀಡಬೇಕಾಗುತ್ತದೆ. ನಂತರದಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಿ ಕಾರ್ಯಾದೇಶವನ್ನು ನೀಡಬೇಕಾಗುತ್ತದೆ. ಕೊಳವೆ ಬಾವಿಯನ್ನು ಕೊರೆಯುವ ಪೂರ್ವದಲ್ಲಿ ಹಾಗೂ ನಂತರದಲ್ಲಿ ಭಾವಚಿತ್ರಗಳನ್ನು ತೆಗೆಸಬೇಕಾಗುತ್ತದೆ. ಜಿಲ್ಲಾ ವ್ಯವಸ್ಥಾಪಕರು, ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಇವರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಕೊಳವೆ ಬಾವಿ ಕೊರೆಯಲು ಯಾವುದೇ ಬೇಡಿಕೆ ಬಂದಿರುವ ಬಗ್ಗೆಯಾಗಲೀ ಅಥವಾ ಆ ಬಗ್ಗೆ ಕ್ರಿಯಾ ಯೋಜನೆಯನ್ನು ತಯಾರಿಸಿರುವುದಾಗಲೀ ಕಂಡುಬಂದಿರುವುದಿಲ್ಲ. ಕೊಳವೆ ಬಾವಿಯನ್ನು ಕೊರೆಯಲು ಯಾರು ಅನುಮೋದನೆಯನ್ನು ನೀಡಿರುತ್ತಾರೆನ್ನುವ ಬಗ್ಗೆ ಕೂಡ ಯಾವುದೇ ದಾಖಲಾತಿಗಳು ಕಂಡುಬರುತ್ತಿಲ್ಲ.

26. ಹನುಮಮ್ಮ ಎನ್ನುವವರ ಜಮೀನಿನಲ್ಲಿ ಕೊಳವೆ ಬಾವಿ ಕೊರೆಯಿಸಿರುವ ಬಗ್ಗೆ ಯಾವುದೇ ಅಂದಾಜು ಪಟ್ಟಿ, ಭೂ ವಿಜ್ಞಾನಿಯ ವರದಿ, ಮತ್ತು ಬೋರ್‌ವೆಲ್‌ಗಾಗಿ ಬೇಡಿಕೆ ಪತ್ರ ಇತ್ಯಾದಿ ದಾಖಲಾತಿಗಳು ಕಂಡುಬರುತ್ತಿಲ್ಲ. ತಿಮ್ಮಪ್ಪ ಎನ್ನುವವರ ಜಮೀನಿನಲ್ಲಿ ಬೋರ್‌ವೆಲ್ ಕೊರೆಯಿಸಿರುವ ಬಗ್ಗೆ ಕೊಳವೆ ಬಾವಿಯ ವಿವರ ಹಾಗೂ ಅಳತೆ ಪುಸ್ತಕದ ಪ್ರತಿಯನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲಾತಿಗಳು ಕಂಡುಬರುತ್ತಿಲ್ಲ. ಶ್ರೀಮತಿ.ದುರ್ಗಮ್ಮ ಎನ್ನುವವರ ಜಮೀನಿನಲ್ಲಿ ಕೊರೆದಿರುವ ಕೊಳವೆ ಬಾವಿಯ ಬಗ್ಗೆ ಮೇಲೆ ಹೇಳಿದ ದಾಖಲಾತಿಗಳು ಕಂಡುಬರುತ್ತಿಲ್ಲ. ಅದೇರೀತಿ ಜಿಲ್ಲಾ ವ್ಯವಸ್ಥಾಪಕರು ಹಾಜರು ಪಡಿಸಿರುವ ದಾಖಲಾತಿಗಳಲ್ಲಿ ಕೊಳವೆ ಬಾವಿಗಳಿಗೆ ಬೇಡಿಕೆ ಪತ್ರ, ಕ್ರಿಯಾ ಯೋಜನೆ, ಕ್ರಿಯಾ ಯೋಜನೆಯ ಅನುಮೋದನೆ, ಅಂದಾಜು ಪಟ್ಟಿ ಮತ್ತು ಭೂ ವಿಜ್ಞಾನಿಯ ವರದಿ ಕಂಡುಬರುತ್ತಿಲ್ಲ. ಹೆಚ್ಚಿನ ಫಲಾನುಭವಿಗಳ ಬಗ್ಗೆ ಕೊಳವೆ ಬಾವಿ ಕೊರೆಯುವ ಪೂರ್ವದಲ್ಲಿ ಮತ್ತು ನಂತರದಲ್ಲಿ ತೆಗೆದಿರುವ ಭಾವಚಿತ್ರಗಳನ್ನು ಕೂಡ ಹಾಜರು ಪಡಿಸಿರುವುದಿಲ್ಲ.

27. ಸದರಿ ಅಂಶಗಳನ್ನು ಗಮನಿಸಿದಾಗ,

i. ತಾಲ್ಲೂಕು ಯೋಜನಾಧಿಕಾರಿ, ಜಿಲ್ಲಾ ವ್ಯವಸ್ಥಾಪಕರು ಹಾಗೂ ಸಂಬಂಧಪಟ್ಟ ಅಭಿಯಂತರರು ಕೊಳವೆ ಬಾವಿಗಳನ್ನು ವಿವಿಧ ದಿನಾಂಕಗಳನ್ನು ಕೊರೆಯಿಸಿರುವ ಬಗ್ಗೆ ಸಮರ್ಪಕವಾದ ದಾಖಲೆಗಳನ್ನು ನಿರ್ವಹಿಸದೆ ಇರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

ii. ಕೊಳವೆ ಬಾವಿಗಳನ್ನು ಕೊರೆಯಿಸಿರುವ ಬಗ್ಗೆ ನೀಡಿರುವ ಪಟ್ಟಿಯನ್ನು ಪರಿಶೀಲಿಸಿದಾಗ, ಹಲವಾರು ಕೊಳವೆ ಬಾವಿಗಳನ್ನು ಒಂದೇ ದಿವಸದಲ್ಲಿ ಕೊರೆಯಿಸಿರುವಂತೆ ದಾಖಲೆಗಳನ್ನು ಸೃಷ್ಟಿ ಮಾಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

iii. ಕೊಳವೆ ಬಾವಿ ಕೊರೆಯುವ ಯೋಜನೆಯ ಕಾರ್ಯವಿಧಾನದಂತೆ ಸೂಕ್ತ ರೀತಿಯಲ್ಲಿ ಮತ್ತು ಸೂಕ್ತ ದಾಖಲಾತಿಗಳನ್ನು ನಿರ್ವಹಿಸದೆ ಕಾಮಗಾರಿಗಳನ್ನು ಮಾಡಿರುವುದನ್ನು ಗಮನಿಸಿದಾಗ,

ಯೋಜನೆಯನ್ನು ಅಧಿಕಾರಿಗಳು ದುರುಪಯೋಗ ಪಡಿಸಿಕೊಂಡಿರುವ ಸಾಧ್ಯತೆಗಳು ಕಂಡುಬರುತ್ತದೆ.

iv. ಕೊಳವೆ ಬಾವಿಗಳನ್ನು ಕೊರೆಯಲಾದ ಬಗ್ಗೆ ಸಂಬಂಧಪಟ್ಟ ಲಾರಿ ಮಾಲೀಕರಿಗೆ ಚೆಕ್ ಮೂಲಕ ಹಣವನ್ನು ಅಧಿಕಾರಿಗಳು ಪಾವತಿ ಮಾಡಬೇಕಾಗಿದ್ದು, ಚೆಕ್‌ನ ಮೂಲಕ ಹಣ ಪಾವತಿ ಮಾಡಿದ ಬಗ್ಗೆ ಮತ್ತು ಸದರಿ ಹಣ ಸಂಬಂಧಪಟ್ಟ ಲಾರಿ ಮಾಲೀಕರ ಖಾತೆಗೆ ಜಮಾ ಆದ ಬಗ್ಗೆ ಯಾವುದೇ ದಾಖಲಾತಿಗಳು ಕಂಡುಬರುತ್ತಿಲ್ಲ.

28. ಎದುರುದಾರರು ಹಾಜರು ಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ ಪ್ರತಿ ಬೋರ್‌ವೆಲ್ ಏಜೆನ್ಸಿಯವರು ಕೊರೆದಿರುವ ಕೊಳವೆ ಬಾವಿಗಳ ವಿವರಗಳನ್ನು ಗಮನಿಸಿದಾಗ ಒಂದು ದಿನದಲ್ಲಿ ಅತೀ ಹೆಚ್ಚು ಕೊಳವೆ ಬಾವಿಗಳನ್ನು ಕೊರೆದಿರುವ ಬಗ್ಗೆ ಈ ಕೆಳಕಂಡ ಅಂಕಿ ಅಂಶಗಳು ಕಂಡುಬರುತ್ತವೆ.

| ಬೋರ್‌ವೆಲ್ ಏಜೆನ್ಸಿಯ ಹೆಸರು : ಆರ್.ಆರ್.ಪಿ.ರಾಕ್ ಡೀಲರ್ಸ್, ಚನ್ನಗಿರಿ | | | |
|---|---|---|---|
| ಕ್ರ.ಸಂ. | ಯೋಜನೆ | ದಿನಾಂಕ | ಕೊರೆದಿರುವ ಕೊಳವೆ ಬಾವಿಗಳ ಸಂಖ್ಯೆ |
| 1 | ಗಂಗಾ ಕಲ್ಯಾಣ ಯೋಜನೆ (ಚನ್ನಗಿರಿ ತಾಲ್ಲೂಕು) | 25/6/2013 | 9 |
| 2 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಚನ್ನಗಿರಿ ತಾಲ್ಲೂಕು) | 29/7/2013 | 29 |
| | | | |
| ಬೋರ್‌ವೆಲ್ ಏಜೆನ್ಸಿಯ ಹೆಸರು : ವಿನಾಯಕ ಬೋರ್‌ವೆಲ್ಸ್, ದಾವಣಗೆರೆ | | | |
| 1 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ದಾವಣಗೆರೆ) | 19/8/2013 | 12 |
| 2 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ದಾವಣಗೆರೆ) | 28/8/2013 | 6 |
| | | | |
| ಬೋರ್‌ವೆಲ್ ಏಜೆನ್ಸಿಯ ಹೆಸರು : ಸಿಂಧು ಬೋರ್‌ವೆಲ್ಸ್, | | | |
| 1 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಜಗಳೂರು) | 30/9/2013 | 9 |
| 2 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಜಗಳೂರು) | 10/10/2013 | 7 |
| 3 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಜಗಳೂರು) | 15/10/2013 | 24 |
| 4 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಜಗಳೂರು) | 24/2/2014 | 7 |
| 5 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಜಗಳೂರು) | 25/2/2014 | 9 |
| 6 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಜಗಳೂರು) | 15/3/2014 | 6 |
| | | | |
| ಬೋರ್‌ವೆಲ್ ಏಜೆನ್ಸಿಯ ಹೆಸರು : ಯಮುನಾ ಡ್ರಿಲ್ಲಿಂಗ್ ಎಂಟರ್‌ಪ್ರೈಸಸ್, ಹರಪನಹಳ್ಳಿ | | | |
| 1 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ದಾವಣಗೆರೆ) | 6/12/2013 | 5 |

| | | | |
|---|---|---|---|
| 2 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ದಾವಣಗೆರೆ) | 13/12/2014 | 6 |
| | | | |
| ಬೋರ್‌ವೆಲ್ ಏಜೆನ್ಸಿಯ ಹೆಸರು : ಶ್ರೀನಿವಾಸ್ ಬೋರ್‌ವೆಲ್ ಏಜೆನ್ಸಿ | | | |
| 1 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಹರಪನಹಳ್ಳಿ ತಾಲ್ಲೂಕು) | 25/3/2015 | 18 |
| 2 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಹರಪನಹಳ್ಳಿ ತಾಲ್ಲೂಕು) | 27/3/2015 | 17 |
| | | | |
| ಬೋರ್‌ವೆಲ್ ಏಜೆನ್ಸಿಯ ಹೆಸರು : ಸೂಜಿಮಲ್ಲೇಶ್ವರ ಬೋರ್‌ವೆಲ್ಸ್, ಚಳ್ಳಕೆರೆ | | | |
| 1 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಚನ್ನಗಿರಿ ತಾಲ್ಲೂಕು) | 15/6/2014 | 7 |
| 2 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಚನ್ನಗಿರಿ ತಾಲ್ಲೂಕು) | 7/8/2014 | 12 |
| 3 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಚನ್ನಗಿರಿ ತಾಲ್ಲೂಕು) | 8/8/2014 | 7 |
| 4 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಚನ್ನಗಿರಿ ತಾಲ್ಲೂಕು) | 15/1/2014 | 10 |
| 5 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಚನ್ನಗಿರಿ ತಾಲ್ಲೂಕು) | 18/2/2014 | 7 |
| 6 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಚನ್ನಗಿರಿ ತಾಲ್ಲೂಕು) | 2/1/2015 | 8 |
| 7 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಚನ್ನಗಿರಿ ತಾಲ್ಲೂಕು) | 11/1/2015 | 15 |
| 8 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಚನ್ನಗಿರಿ ತಾಲ್ಲೂಕು) | 12/1/2015 | 9 |
| 9 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಚನ್ನಗಿರಿ ತಾಲ್ಲೂಕು) | 16/1/2015 | 10 |
| 10 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಚನ್ನಗಿರಿ ತಾಲ್ಲೂಕು) | 20/1/2015 | 7 |
| 11 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಚನ್ನಗಿರಿ ತಾಲ್ಲೂಕು) | 21/1/2015 | 9 |
| 12 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಚನ್ನಗಿರಿ ತಾಲ್ಲೂಕು) | 21/1/2015 | 6 |
| | | | |
| ಬೋರ್‌ವೆಲ್ ಏಜೆನ್ಸಿಯ ಹೆಸರು : ಸಿಂಧು ಬೋರ್‌ವೆಲ್ಸ್, ಚಳ್ಳಕೆರೆ | | | |
| 1 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಚಳ್ಳಕೆರೆ ತಾಲ್ಲೂಕು) | 7/4/2014 | 12 |
| 2 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಚಳ್ಳಕೆರೆ ತಾಲ್ಲೂಕು) | 7/5/2014 | 27 |
| 3 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಚಳ್ಳಕೆರೆ ತಾಲ್ಲೂಕು) | 3/5/2014 | 6 |
| | | | |
| ಬೋರ್‌ವೆಲ್ ಏಜೆನ್ಸಿಯ ಹೆಸರು : ವಿದ್ಯಾ ಬೋರ್‌ವೆಲ್ಸ್, ಗೊಲ್ಲರಹಳ್ಳಿ | | | |
| 1 | ಗ್ರಾಮೀಣ ಕುಡಿಯುವ ನೀರು ಮತ್ತು | 20/9/2015 | 8 |

| | | | |
|---|---|---|---|
| | ನೈರ್ಮಲ್ಯ ಯೋಜನೆ (ಹೊನ್ನಾಳಿ ತಾಲ್ಲೂಕು) | | |
| 2 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಹೊನ್ನಾಳಿ ತಾಲ್ಲೂಕು) | 5/5/2014 | 9 |
| 3 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಹೊನ್ನಾಳಿ ತಾಲ್ಲೂಕು) | 20/7/2014 | 15 |
| 4 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಹೊನ್ನಾಳಿ ತಾಲ್ಲೂಕು) | 21/7/2014 | 10 |
| 5 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಹೊನ್ನಾಳಿ ತಾಲ್ಲೂಕು) | 13/5/2014 | 7 |
| 6 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಹೊನ್ನಾಳಿ ತಾಲ್ಲೂಕು) | 13/4/2014 | 7 |
| 7 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಹೊನ್ನಾಳಿ ತಾಲ್ಲೂಕು) | 22/7/2014 | 6 |
| 8 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಹೊನ್ನಾಳಿ ತಾಲ್ಲೂಕು) | 19/7/2018 | 8 |
| | | | |
| ಬೋರ್‌ವೆಲ್ ಏಜೆನ್ಸಿಯ ಹೆಸರು : ಸಕ್ತಿ ಪವರ್ ಡ್ರಿಲ್ಸ್, ಭದ್ರಾವತಿ | | | |
| 1 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಹೊನ್ನಾಳಿ ತಾಲ್ಲೂಕು) | 7/3/2015 | 19 |
| 2 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಹೊನ್ನಾಳಿ ತಾಲ್ಲೂಕು) | 5/3/2015 | 6 |
| 3 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಹೊನ್ನಾಳಿ ತಾಲ್ಲೂಕು) | 22/12/2015 | 9 |
| 4 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಹೊನ್ನಾಳಿ ತಾಲ್ಲೂಕು) | 3/10/2015 | 7 |
| ಬೋರ್‌ವೆಲ್ ಏಜೆನ್ಸಿಯ ಹೆಸರು : ಶ್ರೀನಿವಾಸ್ ಬೋರ್‌ವೆಲ್ ಏಜೆನ್ಸಿ, | | | |
| 1 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಹರಪನಹಳ್ಳಿ ತಾಲ್ಲೂಕು) | 25/3/2015 | 17 |
| 2 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಹರಪನಹಳ್ಳಿ ತಾಲ್ಲೂಕು) | 13/1/2015 | 5 |
| | | | |
| ಬೋರ್‌ವೆಲ್ ಏಜೆನ್ಸಿಯ ಹೆಸರು : ಶಾಮನೂರು ಬೋರ್‌ವೆಲ್ಸ್ | | | |
| 1 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಹರಿಹರ ತಾಲ್ಲೂಕು) | 2/12/2015 | 8 |
| 2 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಹರಿಹರ ತಾಲ್ಲೂಕು) | 3/12/2015 | 6 |
| 3 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಹರಿಹರ ತಾಲ್ಲೂಕು) | 10/12/2015 | 10 |
| 4 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಹರಿಹರ ತಾಲ್ಲೂಕು) | 5/12/2015 | 4 |
| 5 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಹೊನ್ನಾಳಿ ತಾಲ್ಲೂಕು) | 22/11/2015 | 9 |
| 6 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಹೊನ್ನಾಳಿ ತಾಲ್ಲೂಕು) | 3/12/2015 | 10 |
| 7 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ಹರಿಹರ ತಾಲ್ಲೂಕು) | 3/12/2015 | 6 |
| 8 | ಗ್ರಾಮೀಣ ಕುಡಿಯುವ ನೀರು ಮತ್ತು | 1/12/2015 | 6 |

| | | | |
|---|---|---|---|
| | ನೈರ್ಮಲ್ಯ ಯೋಜನೆ (ಚನ್ನಗಿರಿ ತಾಲ್ಲೂಕು) | | |
| 9 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ (ದಾವಣಗೆರೆ ತಾಲ್ಲೂಕು) | 1/12/2015 | 6 |
| | | | |
| ಬೋರ್‌ವೆಲ್ ಏಜೆನ್ಸಿಯ ಹೆಸರು : ವೆಂಕಟೇಶ್ವರ ಬೋರ್‌ವೆಲ್ಸ್, ಪರಶುರಾಮಪುರ | | | |
| 1 | ಗಂಗಾ ಕಲ್ಯಾಣ ಯೋಜನೆ (ಹರಿಹರ ತಾಲ್ಲೂಕು) | 14/2/2014 | 6 |
| 2 | ಗಂಗಾ ಕಲ್ಯಾಣ ಯೋಜನೆ (ಚನ್ನಗಿರಿ ತಾಲ್ಲೂಕು) | 15/1/2014 | 6 |
| 3 | ಗಂಗಾ ಕಲ್ಯಾಣ ಯೋಜನೆ (ದಾವಣಗೆರೆ ತಾಲ್ಲೂಕು) | 15/1/2014 | 2 |
| 4 | ಗಂಗಾ ಕಲ್ಯಾಣ ಯೋಜನೆ (ಜಗಳೂರು ತಾಲ್ಲೂಕು) | 14/11/2014 | 8 |
| | | | |

29. ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ, ಒಂದು ದಿನದಲ್ಲಿ ಕೊರೆಯಲಾದ ಕೊಳವೆ ಬಾವಿಗಳ ಸಂಖ್ಯೆಗಳನ್ನು ಗಮನಿಸಿದಾಗ, ಒಂದು ದಿವಸದಲ್ಲಿ ಮೇಲಿನ ಪಟ್ಟಿಯಲ್ಲಿ ತಿಳಿಸಿರುವ ಸಂಖ್ಯೆಯ ಕೊಳವೆ ಬಾವಿಗಳನ್ನು ಕೊರೆಯಲು ಅಸಾಧ್ಯವೆನ್ನುವುದು ಸರ್ವವಿಧಿತ. ಒಂದು ದಿನದಲ್ಲಿ ಪಟ್ಟಿಯಲ್ಲಿ ತಿಳಿಸಿರುವಷ್ಟು ಸಂಖ್ಯೆಯ ಕೊಳವೆ ಬಾವಿಗಳನ್ನು ಕೊರೆಯಲಾಗಿದೆಯೆಂದು ಕೊಟ್ಟಿರುವ ವರದಿಯನ್ನು ನಂಬಲು ಸಾಧ್ಯವಿಲ್ಲ. ಆದ್ದರಿಂದ, ಮೇಲೆ ಹೇಳಿದ ಯೋಜನೆಗಳಲ್ಲಿ ಮಾಡಲಾದ ಕೊಳವೆ ಬಾವಿ ಕಾಮಗಾರಿಯಲ್ಲಿ ಅವ್ಯವಹಾರ ಆಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಸೂಕ್ತ ದಾಖಲಾತಿಗಳನ್ನು ನಿರ್ವಹಿಸದೆ ಅಂದರೆ, ಯಾವುದೇ ಬೇಡಿಕೆ ಇಲ್ಲದೆ, ಕ್ರಿಯಾ ಯೋಜನೆಯನ್ನು ತಯಾರಿಸದೆ, ಭೂ ವಿಜ್ಞಾನಿಯಿಂದ ಸಲಹೆಯನ್ನು ಪಡೆಯದೆ, ಅಂದಾಜು ಪಟ್ಟಿಯನ್ನು ತಯಾರಿಸದೆ, ಯೋಜನೆಯ ನಿಯಮಗಳನ್ವಯ ಸೂಕ್ತ ಕ್ರಮ ಕೈಗೊಳ್ಳದೆ ಕೊಳವೆ ಬಾವಿ ಕೊರೆಯಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದ್ದು, ಎದುರುದಾರರು ಸೂಕ್ತ ದಾಖಲೆಗಳನ್ನು ಹಾಜರು ಪಡಿಸದೆ ಇರುವುದನ್ನು ಗಮನಿಸಿದಾಗ, ಎದುರುದಾರರು ವರದಿಯಲ್ಲಿ ತೋರಿಸಿರುವಂತಹ ಸಂಖ್ಯೆಯ ಕೊಳವೆ ಬಾವಿಗಳನ್ನು ಕೊರೆದಿರುವುದು ಅನುಮಾನಕ್ಕೆ ಎಡೆಮಾಡಿಕೊಡುತ್ತದೆ. ಅಲ್ಲದೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಇವರ ವರದಿಯನ್ನು ಪರಿಶೀಲಿಸಿದಾಗ, ಗಂಗಾ ಕಲ್ಯಾಣ ಯೋಜನೆಯಡಿ ಕೊರೆದಿರುತ್ತಾರೆನ್ನಲಾದ ಕೊಳವೆ ಬಾವಿಗಳ ವಿಚಾರವಾಗಿ ಹಲವಾರು ಅಕ್ರಮಗಳನ್ನು ವರದಿ ಮಾಡಿರುವುದು ಕಂಡುಬರುತ್ತದೆ. ಸದರಿ ಅಂಶಗಳನ್ನು ಗಮನಿಸಿದಾಗ, ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊಳವೆ ಬಾವಿ ಕೊರೆಯಿಸುವ ಕಾಮಗಾರಿಯಲ್ಲಿ ಅವ್ಯವಹಾರ ನಡೆದಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

30. ಬೋರ್‌ವೆಲ್ ಕೊರೆಯಿಸುವ ಕಾಮಗಾರಿಗೆ ಸಂಬಂಧಪಟ್ಟಂತೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆಯಡಿಯಲ್ಲಿ ಕೊರೆದಿರುವ ಕೊಳವೆ ಬಾವಿಗಳ ಕಾಮಗಾರಿಗಳ ಬಗ್ಗೆ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಪಟ್ಟಿಯನ್ನು ಸಲ್ಲಿಸಿದ್ದು, ಸದರಿ

ಪಟ್ಟಿಯ ಬಗ್ಗೆ ಮೇಲಿನ ಕೋಷ್ಟಕದಲ್ಲಿ ನಮೂದಿಸಿರುವಂತೆ ಒಂದು ಯಂತ್ರದಿಂದ ಅಷ್ಟು ಸಂಖ್ಯೆಯ ಕೊಳವೆ ಬಾವಿಗಳನ್ನು ಕೊರೆಯಲು ಕಷ್ಟಸಾಧ್ಯವೆಂದು ಕಂಡುಬರುತ್ತದೆ. ಅಲ್ಲದೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆಯಡಿಯಲ್ಲಿ ಕೊರೆದಿರುವ ಕೊಳವೆ ಬಾವಿಗಳ ಕಾಮಗಾರಿಯ ಬಗ್ಗೆ ಜಿಲ್ಲಾ ಪಂಚಾಯಿತಿಯವರು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಆದ್ದರಿಂದ, ಜಿಲ್ಲಾ ಪಂಚಾಯಿತಿಯವರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆಯಡಿಯಲ್ಲಿ ನಡೆಸಿರುವ ಕೊಳವೆ ಬಾವಿ ಕಾಮಗಾರಿಗಳ ಬಗ್ಗೆ ಕೂಡ ಅನುಮಾನ ವ್ಯಕ್ತವಾಗುತ್ತಿದ್ದು, ಆ ಯೋಜನೆಯಲ್ಲೂ ಕೂಡ ಅವ್ಯವಹಾರ ನಡೆದಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

31. ಜಿಲ್ಲಾ ವ್ಯವಸ್ಥಾಪಕರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ದಾವಣಗೆರೆ ಇವರು ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ 2012–13ನೇ ಸಾಲಿನಲ್ಲಿ ಕೊಳವೆ ಬಾವಿ ಸೌಲಭ್ಯವನ್ನು ಪಡೆದಿರುವ 119 ಫಲಾನುಭವಿಗಳ ಪಟ್ಟಿ ಹಾಗೂ ವಿವರವನ್ನು ನೀಡಿದ್ದು, ಸದರಿ ವಿವರದಲ್ಲಿ ಭೂ ವಿಜ್ಞಾನಿಯ ಸಲಹೆಯನ್ನು ಪಡೆಯಲಾಗಿದೆಯೆಂದು ತಿಳಿಸಿದ್ದು, ಆದರೆ ಅಳತೆ ಪುಸ್ತಕದಲ್ಲಿ ದಾಖಲಿಸಿರುವ ಬಗ್ಗೆ ಯಾವುದೇ ಷರಾವನ್ನು ನಮೂದಿಸಿರುವುದಿಲ್ಲ. ಸದರಿಯವರು ಹಾಜರು ಪಡಿಸಿರುವ ದಾಖಲಾತಿಗಳಲ್ಲಿ ಕೊಳವೆ ಬಾವಿಗಾಗಿ ಬೇಡಿಕೆ ಪತ್ರ, ಕ್ರಿಯಾ ಯೋಜನೆ, ಭೂ ವಿಜ್ಞಾನಿಯ ವರದಿ, ಅಂದಾಜು ಪಟ್ಟಿ, ಭಾವಚಿತ್ರಗಳು, ಕಾರ್ಯಾದೇಶ, ಮತ್ತು ಹಣವನ್ನು ಸಂಬಂಧಪಟ್ಟ ಏಜೆನ್ಸಿಯ ಖಾತೆಗೆ ಜಮಾ ಮಾಡಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ಆದ್ದರಿಂದ, ಯೋಜನೆಯ ಮಾರ್ಗಸೂಚಿಯನ್ವಯ ದಾಖಲಾತಿಗಳನ್ನು ನಿರ್ವಹಿಸಿರುವುದು ಕಂಡುಬರುತ್ತಿಲ್ಲ. ಆ ಕಾರಣದಿಂದ ಎದುರುದಾರರ ವಿರುದ್ಧ ಪ್ರತೀಕೂಲ ನಿರ್ಣಯವನ್ನು ಮಾಡಬೇಕಾಗುತ್ತದೆ. ಸದರಿ ಅಂಶಗಳನ್ನು ಗಮನಿಸಿದಾಗ, ಕೊಳವೆ ಬಾವಿ ಕಾಮಗಾರಿಯಲ್ಲಿ ಅವ್ಯವಹಾರ ನಡೆದಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

32 ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ, ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೆ, ಕರ್ತವ್ಯಲೋಪ ಎಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತಿರುವ ಕಾರಣದಿಂದಾಗಿ ಎದುರುದಾರರು ಶಿಸ್ತು ಕ್ರಮಕ್ಕೆ ಭಾದ್ಯಸ್ಥರಾಗಿರುತ್ತಾರೆ.

33. 1 ಮತ್ತು 2ನೇ ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮ 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–

ಎ ರ ಅಡಿಯಲ್ಲಿ, ಎದುರುದಾರರ ವಿರುದ್ಧ ವಿಚಾರಣೆ ನಡೆಸಲು ಹಾಗೂ **1ನೇ ಎದುರುದಾರರಾದ ಶ್ರೀ.ರೆಡ್ಡಿನಾಯಕ್ ಇವರು ದಿ.30/8/2015 ರಲ್ಲಿ ನಿವೃತ್ತಿಯಾಗಿರುವುದರಿಂದ ಸದರಿಯವರ ವಿರುದ್ಧ ಕರ್ನಾಟಕ ಸೇವಾ ನಿಯಮಾವಳಿಗಳ ನಿಯಮ 214(2)(ಬಿ)(i) ರಂತೆ ಸರ್ಕಾರದ ಅನುಮತಿಯೊಂದಿಗೆ** ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

34 ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ. ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

1/3/18

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು–2,**
**ಕರ್ನಾಟಕ ರಾಜ್ಯ, ಬೆಂಗಳೂರು.**

01/3